ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, 2004ನೇ ಸಾಲಿನ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

(ii) ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಆರ್.ವಿ. ದೇಶಪಾಂಡೆ (ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಕೌನ್ಸಿಲ್‌ನಲ್ಲಿ ಈಗಾಗಲೇ ಪಾಸ್ ಆಗಿದೆ, ಸರ್ಚ್ ಕಮಿಟಿಯವರು ಒಂದು ಸಜೆಷನ್ ಮಾಡಿದ್ದರು, ಇದೊಂದು ನ್ಯಾಷನಲ್ ಲೆವಲ್ ಇನ್‌ಸ್ಟಿಟ್ಯೂಟ್, ಇದಕ್ಕೆ ನಮ್ಮ ಭಾರತದ ಚೀಫ್ ಜಸ್ಟೀಸ್‌ಗೆ ನಾವು ಡಿ ಲೆಟ್ ಎಂದು ಕರೆಯುತ್ತೇವೆ. ಮತ್ತು ಅಲ್ಲಿಯ ಇನ್‌ಸ್ಟಿಟ್ಯೂಟ್ ಹೆಡ್‌ಗೆ ನಾವು ಡೈರೆಕ್ಟರ್ ಎಂದು ಕರೆಯುತ್ತೇವೆ. ಸರ್ಚ್ ಕಮಿಟಿಯವರು ಒಂದು ಸಜೆಷನ್ ಕೊಟ್ಟು, ತಾವು ಡೈರೆಕ್ಟರ್‌ಗೆ ವೈಸ್ ಛಾನ್ಸಲರ್ ಎಂದು ನಾಮಕರಣ ಮಾಡಿ, ಚೀಫ್ ಜಸ್ಟೀಸ್ ವಿಸಿಟರ್ ಇದ್ದಾರೆ ಅವರನ್ನು ಛಾನ್ಸಲರ್ ಎಂದು ನಾಮಕರಣ ಮಾಡಿ ಎಂದು ಹೇಳಿದರು. ಆ ಪ್ರಕಾರ ಜಸ್ಟ್ ನಾಮಿಕ್ಲೇಚರ್ ಬದಲಾವಣೆ ಮಾಡುವುದಕ್ಕೆ ಒಂದು ಪ್ರಸ್ತಾವನೆ ಇದೆ, ಅದನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತೇನೆ.

†**ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ):** ಮಾನ್ಯ ಅಧ್ಯಕ್ಷರೆ, ಇದು ಯೂನಿವರ್ಸಿಟಿ ಅಲ್ಲ, ಇದು ಲಾ ಸ್ಕೂಲ್, ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಛಾನ್ಸಲರ್ ವೈಸ್ ಛಾನ್ಸಲರ್ ಎಂದು ಕರೆಯುತ್ತೇವೆ. ಲಾ ಸ್ಕೂಲ್ ಒಂದಕ್ಕೆ ಛಾನ್ಸಲರ್ ಮತ್ತು ವೈಸ್ ಛಾನ್ಸಲರ್ ಏಕೆ ಬೇಕಾಗುತ್ತದೆ ಎಂದು. ಒಂದು ವೇಳೆ ಇದನ್ನು ಡೀಮ್ಡ್ ಯೂನಿವರ್ಸಿಟಿ, ಯೂನಿವರ್ಸಿಟಿ ಮಾಡಿ ಆ ನಂತರ ಬದಲಾವಣೆ ಮಾಡಿ. ಕೇವಲ ಒಂದು ಸಂಸ್ಥೆಗೆ ಇದನ್ನು ಬದಲಾವಣೆ ಮಾಡಿದರೆ, ಪ್ರಾಯಶಃ ಇನ್ನು ಅನೇಕ ಸಂಸ್ಥೆಗಳಿಂದ ಬೇಡಿಕೆ ಬರುತ್ತದೆ. ನಮ್ಮದೂ ಇದೇ ರೀತಿ ಮಾಡಿ ಎಂದು ರಾಜ್ಯದಲ್ಲಿರುವಂತಹ ಇನ್ನೂ ಅನೇಕ ಸಂಸ್ಥೆಗಳು ಇದನ್ನು ಕೇಳಲಿಕ್ಕೆ ಪ್ರಾರಂಭ ಮಾಡುತ್ತಾರೆ. ಆದ್ದರಿಂದ, ಇದು ಯೋಗ್ಯವಲ್ಲವೆಂಬುದು ನನ್ನ ಅಭಿಪ್ರಾಯ. ಕೇವಲ ಒಂದು ಶಾಲೆಗೆ ಛಾನ್ಸಲರ್, ವೈಸ್ ಛಾನ್ಸಲರ್ ಎಂದು ಮಾಡುವುದು ಒಳ್ಳೆಯದಲ್ಲವೆಂಬುದು ನನ್ನ ಅಭಿಪ್ರಾಯ.

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.